ದಿಃ 26-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎ.ಎ.ಪಿ. ರವರಿಂದಃ-**

**7.** ದಾವಾ ಆಸ್ತಿಯು 1 ಎಕರೆ 1 ಗುಂಟೆ, ಅದರಲ್ಲಿ ಫೂಟ್ ಖರಾಬು 3 ಗುಂಟೆ ಇದೆ. ಸರ್ವೆ ನಂ.26 ರ ಉತಾರದ ಪ್ರಕಾರ ಮೂಲ ಮಾಲೀಕರು ಯಲ್ಲವ್ವ ಕೋಂ ಬಸಪ್ಪ ಹೊಲೆರ್ ಎಂದರೆ ಸರಿ. ಯಲ್ಲವ್ವನ ಗಂಡನ ಹೆಸರು ಬಸಪ್ಪ ಎಂದರೆ ಸರಿ. ಯಲ್ಲವ್ವ ಮತ್ತು ಬಸಪ್ಪ ರವರಿಗೆ ಯಾರು ಮಕ್ಕಳು ಇರುವುದಿಲ್ಲ ಎಂದರೆ ಸಾಕ್ಷಿಯು ಯಾರೂ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಅವರಿಗೆ ಮಕ್ಕಳು ಇರುವುದಿಲ್ಲವೆಂದು ಕಾಗದ ಪತ್ರಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ಕಾಗದ ಪತ್ರಗಳನ್ನು ನೋಡಿರುವುದಿಲ್ಲ , ಆದರೆ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಯಲ್ಲವ್ವ ರವರು 1970 ರಲ್ಲಿ ಮೃತರಾಗಿರುತ್ತಾರೆ. ಬಸಪ್ಪ ರವರು 1975 ರಲ್ಲಿ ಮೃತರಾಗಿರುತ್ತಾರೆ. ಯಲ್ಲವ್ವ ಮತ್ತು ಬಸಪ್ಪ ರವರು ಮೃತರಾದ ಬಗ್ಗೆ ಅವರ ಮರಣ ದಾಖಲೆಗಳನ್ನು ತೆಗೆಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಯಲ್ಲವ್ವ ಮತ್ತು ಬಸಪ್ಪ ರವರ ಮನೆತನದ ಅಡ್ಡ ಹೆಸರನ್ನು ಪಿರಗಣ್ಣವರ್ ಎಂದು ಕರೆಯುತ್ತಿದ್ದರು ಎಂದರೆ ಸಾಕ್ಷಿಯು ಅವರ ಮನೆತನದ ಅಡ್ಡ ಹೆಸರನ್ನು ಹೊಲೆಯರ್ ಎಂದು ಕರೆಯುತ್ತಿದ್ದರು , ನಮಗೆ ಪಿರಗಣ್ಣವರ್ ಎಂದು ಕರೆಯುತ್ತಿದ್ದರು ಎಂದು ನುಡಿಯುತ್ತಾರೆ. ಪಿರಗಣ್ಣವರ್ ಮತ್ತು ಹೊಲೆಯರ್ ಎಂಬ ಮನೆತನದ ಅಡ್ಡ ಹೆಸರುಗಳು ಒಂದೇ ಜಾತಿಗೆ ಸಂಬಂಧಪಟ್ಟವುಗಳಾಗಿರುತ್ತವೆ ಎಂದರೆ ಸರಿ.

**8.** ಬಸಪ್ಪ ರವರಿಗೆ ಬಾಳಪ್ಪ ಎಂಬ ತಮ್ಮ ಇದ್ದರು ಎಂದರೆ ಸರಿಯಲ್ಲ. ಬಸಪ್ಪ ರವರ ವಂಶಾವಳಿಯನ್ನು ತೆಗೆಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಬಸಪ್ಪ ರವರಿಗೆ ಬಾಳಪ್ಪ ರವರು ಸಹೋದರ ಎಂಬ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸಪ್ಪ ರವರ ಮನೆ ಉತಾರುವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಬಾಳಪ್ಪ ರವರಿಗೆ ಮೂರು ಜನ ಮಕ್ಕಳು , ಅವರುಗಳೆಂದರೆ ಬರ್ಮಪ್ಪ, ಬಾಳಪ್ಪ ಮತ್ತು ಚಂದ್ರಪ್ಪ ಎಂದರೆ ಸರಿ . 1 ರಿಂದ 3 ನೇ ಪ್ರತಿವಾದಿಗಳು ಬರ್ಮಪ್ಪ ರವರ ಮಕ್ಕಳು ಎಂದರೆ ಸರಿ. ಇನ್ನೊಬ್ಬರು 1 ರಿಂದ 3 ನೇ ಪ್ರತಿವಾದಿಯರಿಗೆ ಒಬ್ಬ ಸಹೋದರಿ ಇರುತ್ತಾರೆ . ಬರ್ಮಪ್ಪ ರವರ ಸಹೋದರನಾದ ಬಾಳಪ್ಪ ರವರು ಮೃತರಾಗಿರುತ್ತಾರೆ ಎಂದರೆ ಸರಿ, ಸದರಿ ಬಾಳಪ್ಪ ರವರಿಗೆ ಮಕ್ಕಳು ಇರುವುದಿಲ್ಲ , ಆದರೆ ಅವರ ಹೆಂಡತಿ ಮಾತ್ರ ಇರುತ್ತಾರೆ , ಅವರ ಹೆಂಡತಿ ಜೀವಂತ ಇರುತ್ತಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ಅವರ ಹೆಂಡತಿ ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರು ಜೀವಂತ ಇರುತ್ತಾರೆ ಎಂದು ಅವರನ್ನು ಭೇಟಿಯಾಗಿ ನೋಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಬಾಳಪ್ಪ ರವರ ಹೆಂಡತಿ ಹೊರಗೆ ಏಕೆ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ . ಸದರಿ ಬಾಳಪ್ಪ ರವರ ಹೆಂಡತಿ ಮಕ್ಕಳು ಇಲ್ಲದೆ ಇದ್ದರೂ ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**9.** ಚಂದ್ರಪ್ಪ ರವರು ಮೃತರಾಗಿರುತ್ತಾರೆ ಎಂದರೆ ಸರಿ. ಚಂದ್ರಪ್ಪ ರವರಿಗೆ ಯಾರೂ ವಾರಸುದಾರರು ಇರುವುದಿಲ್ಲ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರ ಅಜ್ಜನಾದ ಬಾಳಪ್ಪ ರವರಿಗೆ ಕೇವಲ 1 ರಿಂದ 3 ನೇ ಪ್ರತಿವಾದಿಯ ಮಾತ್ರ ವಾರಸುದಾರರು ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರ ಅಜ್ಜನ ಆಸ್ತಿಯಲ್ಲಿ ಬಾಳಪ್ಪ ತೀರಿಕೊಂಡ ನಂತರ 1 ರಿಂದ 3 ನೇ ಪ್ರತಿವಾದಿಯರ ಹೆಸರನ್ನು ನಮೂದುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರ ಅಜ್ಜನಾದ ಬಾಳಪ್ಪ ತೀರಿಕೊಂಡ ನಂತರ ಅವರ ಆಸ್ತಿಗಳನ್ನು 1 ರಿಂದ 3 ನೇ ಪ್ರತಿವಾದಿಯರು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. 1 ರಿಂದ 3 ನೇ

ಪ್ರತಿವಾದಿಯರ ಅಜ್ಜನಾದ ಬಾಳಪ್ಪ ರವರ ಮನೆತನದ ಅಡ್ಡ ಹೆಸರನ್ನು ಹೊಲೆಯರ್ , ಪಿರಗಣ್ಣವರ್ ಮತ್ತು ಪಿರಗಿ ಎಂದು ಕರೆಯುತ್ತಿದರು ಎಂದರೆ ಸರಿಯಲ್ಲ . ಬಸಪ್ಪ ಮತ್ತು 1 ರಿಂದ 3 ನೇ ಪ್ರತಿವಾದಿಯರು ಹಾಗೂ ಅವರ ಅಜ್ಜನಾದ ಬಾಳಪ್ಪ ರವರು ಒಂದೇ ಮನೆತನದವರು ಎಂದರೆ ಸಾಕ್ಷಿಯು ಬಾಳಪ್ಪ ಮತ್ತು ಯಲ್ಲಪ್ಪ ರವರು ಮಾತ್ರ ಒಂದೇ ಮನೆತನದವರು, ಬಸಪ್ಪ ರವರು ಒಂದೇ ಮನೆತನದವರು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಬಾಳಪ್ಪ ರವರ ತಂದೆ ಹೆಸರು ಏನು ಎಂದರೆ ಸಾಕ್ಷಿಯು ಬಾಳಪ್ಪ ಮತ್ತು ಯಲ್ಲಪ್ಪ ರವರು ಸಹೋದರರಾಗಿದ್ದು ಅವರ ತಂದೆಯವರ ಹೆಸರು ಬರ್ಮಪ್ಪ ಎಂದು ಇರುತ್ತದೆ ಎಂದು ನುಡಿಯುತ್ತಾರೆ, ಸಾಕ್ಷಿಯು ಮುಂದುವರೆದು ಬಸಪ್ಪ ರವರು ಅವರ ಮನೆತನಕ್ಕೆ ಸಂಬಂಧಪಡುವುದಿಲ್ಲ ಎಂದು ನುಡಿಯುತ್ತಾರೆ . ನಾನು ಈ ರೀತಿಯಾಗಿ ಉತಾರುಗಳ ದಾಖಲೆಗಳ ಆಧಾರದ ಮೇಲಿಂದ ಹೇಳುತ್ತಿದ್ದೇನೆ. ನಾನು ಈ ಪ್ರಕರಣಕ್ಕೆ ಅನುಕೂಲವಾಗಲು ಬಾಳಪ್ಪ ಮತ್ತು ಯಲ್ಲಪ್ಪ ಸಹೋದರರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**10.** ಯಲ್ಲವ್ವ ಮತ್ತು ಬಸಪ್ಪ ರವರಿಗೆ 1 ರಿಂದ 3 ನೇ ಪ್ರತಿವಾದಿಯರು ಮಾತ್ರ ವಾರಸುದಾರರು ಇರುತ್ತಾರೆ ಎಂದು ತಹಶೀಲ್ದಾರ್ ರವರ ಮುಂದೆ ವಾರಸಾ ಪ್ರಮಾಣ ಪತ್ರಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ . ದಾವೆಯನ್ನು ದಾಖಲಿಸುವ ಪೂರ್ವದಲ್ಲಿ 1 ರಿಂದ 3 ನೇ ಪ್ರತಿವಾದಿಯರು ಯಲ್ಲವ್ವ ಮತ್ತು ಬಸಪ್ಪ ರವರ ಆಸ್ತಿಯ ದಾಖಲೆಗಳಲ್ಲಿ ವಾರಸನಾಥೆಯಿಂದ ಅವರ ಹೆಸರನ್ನು ನಮೂದಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಡೂಪ್ಲಿಕೇಟ್ ಆಧಾರದಿಂದ ನಮೂದಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಡೂಪ್ಲಿಕೇಟ್ ಹೆಸರನ್ನು ನೊಂದಾಯಿಸಿರುವ ಕುರಿತು ನಾನು ತಕರಾರು ಮಾಡಿರುತ್ತೇನೆಯೇ ಎಂದರೆ

ಸಾಕ್ಷಿಯು ಪ್ರಸ್ತುತ ದಾವೆಯನ್ನು ದಾಖಲಿಸಿರುವುದಾಗಿ ನುಡಿಯುತ್ತಾರೆ . ಕಂದಾಯ ನ್ಯಾಯಾಲಯಗಳಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪ್ರಕರಣಗಳು ಇರುತ್ತವೆ ಎಂದರೆ ಸರಿ. ಕಂದಾಯ ನ್ಯಾಯಾಲಯಗಳಲ್ಲಿ ನಮ್ಮ ಪರವಾಗಿ ಆದೇಶವಾಗಿರುವುದಿಲ್ಲ ಮತ್ತು ನ್ಯಾಯಾಲಯದಲ್ಲಿ ದಾವೆಯು ಚಾಲ್ತಿ ಇರುವ ಕಾರಣದಿಂದ ಸದರಿ ಕಂದಾಯ ನ್ಯಾಯಾಲಯಗಳಲ್ಲಿರುವ ಪ್ರಕರಣಗಳನ್ನು ವಜಾ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಕಂದಾಯ ನ್ಯಾಯಾಲಯಗಳ ಆದೇಶದ ಮೇರೆಗೆ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಗೆ ಯಾವುದೇ ಸಂಬಂಧ ಇಲ್ಲದೆ ಇರುವುದರಿಂದ ಕಂದಾಯ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**